ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ಕುಂದಾಪುರ ತಾಲ್ಲೂಕು ಕಿರಿಯ ಪ್ರಾಥಮಿಕ ಶಾಲೆ, ಹೊಸಮಠ, ಕೂರ್ಗಿ ಗ್ರಾಮದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 96 ಹಾಗೂ ಅಧ್ಯಾಪಕರ ಸಂಖ್ಯೆ 2.

ಆ) ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ 96. ಹಾಜರಾತಿ 70. ಇವುಗಳಲ್ಲಿ ಪರಿಶಿಷ್ಟ ಜಾತಿ -6 ಹೊರಗ -29 ಇರುತ್ತದೆ.

ವಿಷಯ :- ದ. ಕ. ಜಿಲ್ಲೆಯಲ್ಲಿ ಒಬ್ಬರೇ ಅಧ್ಯಾಪಕರಿರುವ ಕಿರಿಯ **ಪ್ರಾಥಮಿಕ ಶಾಲೆಗಳ ಸಂಖ್ಯೆ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 765 (1619)

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರೇ ಅಧ್ಯಾಪಕರಿರುವ ಕಿರಿಯ ಪ್ರಾಥಮಿಕ ಶಾಲೆಗಳೆಷ್ಟು?

ಆ) ಎರಡು ಹುದ್ದೆಗಳು ಮಂಜೂರಾದ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬರನ್ನು ಬೇರೆಡೆಗೆ ನಿಯುಕ್ತಿಗೊಳಿಸಿ ಒಬ್ಬನೇ ಕೆಲಸ ಮಾಡುವ ಕಿರಿಯ ಪ್ರಾಥಮಿಕ ಶಾಲೆಗಳೆಷ್ಟು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರೇ ಅಧ್ಯಾಪಕರಿರುವ ಶಾಲೆಗಳ ಸಂಖ್ಯೆ-39

ಆ) ಎರಡು ಹುದ್ದೆಗಳು ಮಂಜೂರಾಗಿದ್ದು ಒಬ್ಬರನ್ನು ಬೇರೆ ಕಡೆಗೆ ನಿಯೋಜಿಸಿರುವ ಶಾಲೆಗಳ ಸಂಖ್ಯೆ -51

ವಿಷಯ :- ವಾಣಿಜ್ಯ ವಿದ್ಯಾಶಾಲೆಯನ್ನು ತೆರೆಯಲು ಇರತಕ್ಕ ನಿಯಮಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 766 (1484)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ವಾಣಿಜ್ಯ ವಿದ್ಯಾಶಾಲೆಯನ್ನು ತೆರೆಯಲು ಸರ್ಕಾರದವರು ರೂಪಿಸಿರುವ ನಿಯಮಗಳೇನು? ಒಂದು ವಾಣಿಜ್ಯ ವಿದ್ಯಾಶಾಲೆಗೂ ಮತ್ತೊಂದು ವಾಣಿಜ್ಯ ವಿದ್ಯಾಶಾಲೆಗೂ ಅಂತರವನ್ನೇನಾದರೂ ನಿಗಧಿಪಡಿಸಲಾಗಿದೆಯೇ?

2. ಹಾಗಿದ್ದಲ್ಲಿ ಒಂದು ವಾಣಿಜ್ಯ ಶಾಲೆಯ ಎದುರುಗಡೆ ಮತ್ತೊಂದು ವಾಣಿಜ್ಯ ವಿದ್ಯಾ ಶಾಲೆಯನ್ನು ತೆರೆಯಲು ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಅಧಿಕಾರವೇನಾದರೂ ನೀಡಲಾಗಿದೆಯೇ?

3. ಸರ್ಕಾರ ನೀಡಿರುವ ಅಧಿಕಾರವನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿರುವ ಪ್ರಕರಣಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

1. ನಿಯಮಗಳನ್ನು ರೂಪಿಸಲಾಗಿದೆ. ಒಂದು ವಾಣಿಜ್ಯ ವಿದ್ಯಾ ಶಾಲೆಯಿಂದ ಮತ್ತೊಂದು ವಾಣಿಜ್ಯ ವಿದ್ಯಾಶಾಲೆಗೆ ಅಂತರ ನಿಗಧಿಪಡಿಸಲಾಗಿದೆ.

2. ಇಲ್ಲ.

3. ಬಂದಿದೆ. ಸಂಬಂಧಿಸಿದ ಅಧಿಕಾರಿಗಳ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ :- ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸರಬರಾಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ 767 (1524)

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿಗೆ ಮೂರು ಹಂತದ ಆಲೋಚನೆ ಇರುವುದು ಸರಿಯೇ (ಅಂದರೆ "ಓವರ್ ಟ್ಯಾಂಕ್, ಮಿನಿ ವಾಟರ್ ಸಪ್ಲೈ, ಬೋರ್‌ವೆಲ್")

2. ಇದನ್ನು ಜನಸಂಖ್ಯೆಯ ಆಧಾರದ ಮೇಲೆ ಮಾಡಿದ್ದೀರಿ? ಇದನ್ನು ಸರಿಪಡಿಸಲು ಸಾಧ್ಯವಿಲ್ಲವೆ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-

1. ಗ್ರಾಮೀಣ ಪ್ರದೇಶದ ಅವ್ಯಶಕತೆ ಹಾಗೂ ನಿರ್ವಹಣೆ ದೃಷ್ಟಿಯಿಂದ ಮೂರು ವಿಧದ ಕುಡಿಯುವ ನೀರಿನ ಯೋಜನೆಗಳು ಇರುತ್ತವೆ.

2. ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಮೂರು ವಿಧದ ಯೋಜನೆಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಮಾಡಿದ್ದರೂ ಯಾವುದೇ ಕುಡಿಯುವ ನೀರಿನ